# ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

## GULBARGA ELECTRICTY SUPPLY COMPANY LIMITED

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
ಕಾರ್ಯ ಮತ್ತು ಪಾಲನಾ ಉಪ-ವಿಭಾಗ ಜೆಸ್ಕಾಂ
ಯಲಬುರ್ಗಾ.
Tel No:08534-220607/220137

Assistant Executive Engineer (Ele)
O & M Sub-division, GESCOM Yelburga
E-mail ID: aeeyelburga@gmail.com


ಸಕಾನಿಅ(ವಿ)/ಸಅಂ(ತಾಂ)/ಹಿಸ/ಯಲ/19-20/ 2586-96          Date: 12/9/19

## ದಿನಾಂಕ:-17.08.2019 ರಂದು ಜೆಸ್ಕಾಂ ಗ್ರಾಹಕರ ಸಂವಾದ ಸಭೆಯ ನಡುವಳಿಗಳು

* * *

ದಿನಾಂಕ:-17.08.2019 ರಂದು ಮಧ್ಯಾಹ್ನ 12.30 ಕ್ಕೆ ಕಾರ್ಯ ಮತ್ತು ಪಾಲನಾ ಉಪ ವಿಭಾಗ, ಗು.ವಿ.ಸ.ಕಂ.ನಿ. ಯಲಬುರ್ಗಾ ಕಛೇರಿಯಲ್ಲಿ ಜೆಸ್ಕಾಂ ಗ್ರಾಹಕರ ಸಂವಾದ ಸಭೆಯನ್ನು ಶ್ರೀ ಎಮ್.ಎಸ್.ಪತ್ತಾರ, ಪ್ರಭಾರಿ ಅಧೀಕ್ಷಕ ಅಭಿಯಂತರರು(ವಿ) ಹಾಗೂ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕೊಪ್ಪಳ ರವರ ಅಧ್ಯಕ್ಷತೆಯಲ್ಲಿ ಗ್ರಾಹಕರ ಸಂವಾದ ಸಭೆಯನ್ನು ನಡೆಸಲಾಯಿತ್ತು, ಸದರಿ ಸಭೆಯ ನಡವಳಿಗಳು.

### ಉಪಸ್ಥಿತರು: ಹಾಜರಿಯ ಪುಸ್ತಕದಂತೆ:

1. ಶ್ರೀ ಗಿರಿಯಪ್ಪ ತಂದೆ ಕಿಟ್ಟಪ್ಪ ನಾಯ್ಕ — ಸಾ:-ಚಿಕ್ಕೋಪ್ಪತಾಂಡ
2. ಶ್ರೀ ವೆಂಕಟೇಶ ಪೂಜಾರ, ಗ್ರಾಮ ಪಂಚಾಯತ ಸದಸ್ಯರು, — ಸಾ:-ಬಳೊಟಗಿತಾಂಡ
3. ಶ್ರೀ ಅಣ್ಣಪ್ಪ, ಎಮ್ ಕಮತರ — ಸಾ:- ಬಳೊಟಗಿ
4. ಶ್ರೀ ಮಲ್ಲನಗೌಡ ಎಸ್ ಕೋನನಗೌಡ — ಸಾ:-ಬೇವೂರ
5. ಶ್ರೀ ಮಹೇಶ ಬೂತೆ — ಸಾ:-ಯಲಬುರ್ಗಾ
6. ಮಾರುತಿ — ಸಾ:-ಹಿರೇಅರಳ್ಳಿಹಳಿ

### ಕಾರ್ಯ ಮತ್ತು ಪಾಲನಾ ಉಪ ವಿಭಾಗ, ಗು.ವಿ.ಸ.ಕಂ.ನಿ., ಯಲಬುರ್ಗಾ ಅಧಿಕಾರಿ/ನೌಕರರು:

1. ಶ್ರೀ ಎಮ್.ಎಸ್.ಪತ್ತಾರ, ಪ್ರಭಾರಿ ಅಧೀಕ್ಷಕ ಅಬಿಯಂತರರು(ವಿ) ಹಾಗೂ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕೊಪ್ಪಳ.
2. ಶ್ರೀ ಮಹಮ್ಮದ ಕಲೀಮುದ್ದೀನ್ ಅಹ್ಮದ್,ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
3. ಶ್ರೀ ಮೌಲಸಾಬ್, ಶಾಖಾಧಿಕಾರಿ, ಪ್ರಭಾರಿ ಸಹಾಯಕ ಅಭಿಯಂತರರು(ತಾಂ), ಶಾಖಾಧಿಕಾರಿ, ಜೆಸ್ಕಾಂ, ಶಾಖಾಧಿಕಾರಿ, ವಜ್ರಬಂಡಿ
4. ಶ್ರೀ ಅಮರೇಶ ರಡ್ಡಿ, — ಶಾಖಾಧಿಕಾರಿ, ಜೆಸ್ಕಾಂ ಯಲಬುರ್ಗಾ
5. ಶ್ರೀ ಗಿರೀಶ ಎಮ್, — ಶಾಖಾಧಿಕಾರಿ, ಜೆಸ್ಕಾಂ ಕುಕನೂರ
6. ಶ್ರೀ ಉಪೇಂದ್ರ , — ಶಾಖಾಧಿಕಾರಿ, ಜೆಸ್ಕಾಂ, ಇಟಗಿ/ತಳಕಲ್ಲ್
7. ಶ್ರೀ ಪ್ರಸಾದ್ — ಶಾಖಾಧಿಕಾರಿ, ಜೆಸ್ಕಾಂ, ಹಿರೇವಂಕಲಕುಂಟಾ
8. ಶ್ರೀ ಹನುಮಂತಪ್ಪ ತಿಮ್ಮಾರಡ್ಡಿ, — ಪ್ರಭಾರಿ ಶಾಖಾಧಿಕಾರಿ, ಜೆಸ್ಕಾಂ, ಮಂಗಳೂರ
9. ಶ್ರೀ ರವಿ, ಹಿರಿಯ ಸಹಾಯಕರು, ಜೆಸ್ಕಾಂ ಯಲಬುರ್ಗಾ.

ಶ್ರೀ ಮಹಮ್ಮದ ಕಲೀಮುದ್ದೀನ್ ಅಹ್ಮದ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಜೆಸ್ಕಾಂ, ಯಲಬುರ್ಗಾ ಇವರು ಸಭೆಯಲ್ಲಿ ಹಾಜರಾಗಿದ್ದ ಗ್ರಾಹಕರು ಹಾಗೂ ಅಧಿಕಾರಿ/ನೌಕರರನ್ನು ಸಭೆಗೆ ಸ್ವಾಗತಿಸಿದರು. ವಿದ್ಯುತ್ ಬಿಲ್ ಕುರಿತಾದ ದೂರುಗಳ ಇತ್ಯರ್ಥ ಹಾಗೂ ಇತ್ಯರ್ಥವಾಗದೇ ಉಳಿದ ಇತರೆ ವಿದ್ಯುತ್ ಸಮಸ್ಯೆಗಳ ಮತ್ತು ಗ್ರಾಹಕರ ಕುಂದು ಕೊರತೆಗಳನ್ನು ಕುರಿತು ಚರ್ಚಿಸಲು ಮತ್ತು ಅವುಗಳಿಗೆ ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳುವ ಸಲುವಾಗಿ ಪ್ರತಿ ತಿಂಗಳು ಗ್ರಾಹಕರ ಸಭೆ ನಡೆಸಿ, ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಈ ಸಭೆಯಲ್ಲಿ ಗ್ರಾಹಕರು ವಿದ್ಯುತ್‌ಗೆ ಸಂಬಂಧಿಸಿದ ಯಾವುದೇ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು ಎಂದು ತಿಳಿಸುತ್ತಾ, ಸಭೆಯ ಉದ್ದೇಶದ ಕುರಿತಾಗಿ ಸಭೆಯಲ್ಲಿ ವಿವರಿಸಿದರು.

**ಸಭೆಯಲ್ಲಿ ಚರ್ಚಿಸಲ್ಪಟ್ಟ ವಿಷಯಗಳು:**

1. ಶ್ರೀ ಗಿರಿಯಪ್ಪ ತಂದೆ ಕಿಟ್ಟಪ್ಪ ನಾಯ್ಕ, ಸಾ:-ಚಿಕ್ಕೊಪ್ಪ ತಾಂಡ ಈ ಸಭೆಯಲ್ಲಿ ಹಾಜರಿದ್ದು, ಸದರಿಯವರು ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ಅರ್ಜಿ ನೋಂದಾಯಿಸಿದ್ದು, ಸದರಿಯವರಿಗೆ ಪತ್ಯೇಕವಾದ ವಿದ್ಯುತ್ ಪರಿವರ್ತಕ ಅಳವಡಿಸಬೇಕೆಂದು ಮನವಿ ಸಲ್ಲಿಸಿರುತ್ತಾರೆ, ಈ ವಿಷಯದ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಜೆಸ್ಕಾಂ, ಯಲಬುರ್ಗಾ ಇವರು ಶಾಖಾಧಿಕಾರಿ, ಜೆಸ್ಕಾಂ, ಯಲಬುರ್ಗಾ ಇವರಿಗೆ ಸ್ಥಳ ಪರಿಶೀಲಿಸಿ ನಿಗಮದ ನಿಯಾಮನುಸಾರ ಕ್ರಮಕೈಗೊಳ್ಳಲು ಸೂಚಿಸಿರುತ್ತಾರೆ,

2. ಶ್ರೀ ವೆಂಕಟೇಶ ಪೂಜಾರ, ಗ್ರಾಮ ಪಂಚಾಯತ ಸದಸ್ಯರು, ಸಾ:-ಬಳೊಟಗಿ ತಾಂಡ ಇವರು ಬಳೊಟಗಿ ತಾಂಡದಲ್ಲಿ ಕುಡಿಯುವ ನೀರಿನ ಬೋರವೆಲ್ ಕೊರೆಯಿಸಿದ್ದು, ಸದರಿ ಬೋರವೆಲ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸಬೇಕೆಂದು ಮನವಿ ಸಲ್ಲಿಸಿರುತ್ತಾರೆ, ಈ ವಿಷಯದ ಬಗ್ಗೆ ಸಹಾಯಕ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),ಜೆಸ್ಕಾಂ, ಯಲಬುರ್ಗಾ ಇವರು ಸಂಬಂಧಪಟ್ಟ ಗ್ರಾಮ ಪಂಚಾಯತಿ ವತಿಯಿಂದ ಈ ಕಛೇರಿಯಲ್ಲಿ ಅರ್ಜಿ ನೋಂದಾಯಿಸಿದ ನಂತರ ಕ್ರಮಕೈಗೊಳ್ಳಲಾಗವದು ಎಂದು ತಿಳಿಸಿರುತ್ತಾರೆ,

3. ಶ್ರೀ ವೆಂಕಟೇಶ ಪೂಜಾರ ಸಾ:-ಬಳೊಟಗಿ ತಾಂಡ ಇವರು ಬಳೊಟಗಿ ತಾಂಡದಲ್ಲಿ ವಿದ್ಯುತ್ ಪರಿವರ್ತಕವುಯ ತುಂಬಾ ಕೆಳಗಡೆ ಇದ್ದು, ಇದು ತುಂಬಾ ಅಪಾಯಕಾರಿವಿದ್ದು ಕಾರಣ ಸದರಿ ವಿದ್ಯುತ್ ಪರಿವರ್ತಕವನ್ನು ಸರಿಪಡಿಸಬೇಕೆಂದು ಮನವಿ ಸಲ್ಲಿಸಿರುತ್ತಾರೆ, ಈ ವಿಷಯದ ಸಹಾಯಕ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),ಜೆಸ್ಕಾಂ, ಯಲಬುರ್ಗಾ ಇವರು ಶಾಖಾಧಿಕಾರಿ, ಜೆಸ್ಕಾಂ, ಯಲಬುರ್ಗಾ ಇವರಿಗೆ ಸ್ಥಳ ಪರಿಶೀಲಿಸಿ ಅಪಾಯಕಾರಿ ಇರುವ ವಿದ್ಯುತ್ ಪರಿವರ್ತಕವನ್ನು ಸರಿಪಡಿಸಲು ಸೂಚಿಸಿರುತ್ತಾರೆ,

4. ಶ್ರೀ ಮಲ್ಲನಗೌಡ ಎಸ್ ಕೋನನಗೌಡ್ರ ಸಾ:-ಬೇವೂರು ಇವರು ಸಭೆಯಲ್ಲಿ ಹಾಜರಿದ್ದು, ಬೇವೂರ ಕೊಪ್ಪಳ ರಸ್ತೆಗೆ ಬರುವ ವಾಯರ್ ಜೋತು ಬಿದ್ದಿದ್ದು, ಸದರಿ ವಾಯರ್‌ನ್ನು ಸರಿಪಡಿಸಿಬೇಕೆಂದು ತಿಳಿಸಿರುತ್ತಾರೆ, ಸದರಿ ವಿಷಯದ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಜೆಸ್ಕಾಂ, ಯಲಬುರ್ಗಾ ಇವರು ಶಾಖಾಧಿಕಾರಿ, ಜೆಸ್ಕಾಂ, ಹಿರೇವಂಕಲಕುಂಟಾ ಇವರಿಗೆ ಸ್ಥಳ ಪರಿಶೀಲಿಸಿ ಸದರಿ ವಾಯರನ್ನು ಸರಿಪಡಿಸಲು ಸೂಚಿಸಿರುತ್ತಾರೆ,

5. ಶ್ರೀ ಮಹೇಶ ಬೂತೆ ಸಾ:-ಯಲಬುರ್ಗಾ ಇವರು ತಮ್ಮ ಕಾರ್ಖಾನಗೆ ಅಳವಡಿಸಿರುವ 63ಕೆವಿಯ ವಿದ್ಯುತ್ ಪರಿವರ್ತಕ ಅಧಿಕ ಭಾರದಿಂದ ಕೊಡಿದ್ದು ಹಾಗೂ ವೋಲ್ಟೇಜ್ ಸಮಸ್ಯೆವಿದ್ದು ಸದರಿ ಸಮಸ್ಯೆಯನ್ನು ಬಗೆಹರಿಸಬೇಕೆಂದು ಮನವಿ ಸಲ್ಲಿಸಿರುತ್ತಾರೆ, ಸದರಿ ವಿಷಯದ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಜೆಸ್ಕಾಂ, ಯಲಬುರ್ಗಾ ಇವರಿ ಶಾಖಾಧಿಕಾರಿ ಜೆಸ್ಕಾಂ ಯಲಬುರ್ಗಾ ಇವರಿಗೆ ಸ್ಥಳ ಪರಿಶೀಲಿಸಿ ಕಂಪನಿಯ ನಿಯಮಾವಳಿ ಅನುಸಾರ

6. ಶ್ರೀ ಅಣ್ಣಪ್ಪ ಸಾ:–ಹಿರೇಅರಳ್ಳಿಹಳ್ಳಿ ಇವರು ಹಿರೇಅರಳ್ಳಿಹಳ್ಳಿ ಗ್ರಾಮದ ಶ್ರೀ ಶರಣಬಸವೇಶ್ವರ ದೇವಸ್ಥಾನದ ಹತ್ತಿರ ಇರುವ ವಿದ್ಯುತ್ ಪರಿವರ್ತಕವು ತುಂಬಾ ಅಪಾಯಕಾರಿವಿದ್ದು, ಸದರಿ ವಿದ್ಯುತ್ ಪರಿವರ್ತಕವನ್ನು ಸ್ಥಳಾಂತರಬೇಕೆಂದು ಮನವಿ ಸಲ್ಲಿಸಿರುತ್ತಾರೆ, ಸದರಿ ವಿಷಯದ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಜೆಸ್ಕಾಂ, ಯಲಬುರ್ಗಾ ಇವರು ಶಾಖಾಧಿಕಾರಿ, ಜೆಸ್ಕಾಂ, ವಜ್ರಬಂಡಿ ಇವರಿಗೆ ಸ್ಥಳ ಪರಿಶೀಲಿಸಿ ಒಂದು ವೇಳೆ ಸದರಿ ವಿದ್ಯುತ್ ಪರಿವರ್ತಕ ಅಪಾಯಕಾರಿವಿದ್ದಲ್ಲಿ ಪರಿವರ್ತಕವನ್ನು ಸ್ಥಳಾಂತರಿಸಲು ಕಂಪನಿಯ ನಿಯಮಾವಳಿ ಅನುಸಾರ ಕ್ರಮಕೈಗೊಳ್ಳಬೇಕೆಂದು ಸೂಚಿಸಿರುತ್ತಾರೆ,

ಮೇಲ್ಕಾಣಿಸಿದ ಎಲ್ಲಾ ವಿಷಯಗಳನ್ನು ಚರ್ಚಿಸಿದ ನಂತರ ಎಲ್ಲಾ ಗ್ರಾಹಕರಿಗೆ ಮೇಲೆ ತಿಳಿಸಿದ ಎಲ್ಲಾ ಸಮಸ್ಸೆಗಳಿಗೆ ಕಂಪನಿಯ ನಿಯಾಮವಳಿನುಸಾರ ಮುಂಜೂರಾತಿ ಪಡೆದುಕೊಂಡು ಅತೀ ಶೀಘ್ರದಲ್ಲಿ ಕೆಲಸಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗುವದು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿರುತ್ತಾರೆ,

ಸದರಿ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತ್ತು,

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನಾ ಉಪ ವಿಭಾಗ,
ಗು.ವಿ.ಸ.ಕಂ.ನಿ.ಯಲಬುರ್ಗಾ

ಪ್ರತಿಗಳನ್ನು ದಯಾಪರ ಅವಗಾಹನೆಗಾಗಿ ಸಲ್ಲಿಸಲಾಗಿದೆ.

1.ಮಾನ್ಯ ಮುಖ್ಯ ಅಭಿಯಂತರರು(ವಿ), ಬಳ್ಳಾರಿ ವಲಯ, ಗು.ವಿ.ಸ.ಕಂ.ನಿ., ಬಳ್ಳಾರಿ.
2.ಮಾನ್ಯ ಅಧೀಕ್ಷಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನ ವೃತ್ತ, ಗು.ವಿ.ಸ.ಕಂ.ನಿ., ಮುನಿರಾಬಾದ್.
3.ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನ ವಿಭಾಗ, ಗು.ವಿ.ಸ.ಕಂ.ನಿ,ಕೊಪ್ಪಳ.

ಪ್ರತಿಯನ್ನು

1.ಶಾಖಾಧಿಕಾರಿಗಳು,ಜೆಸ್ಕಾಂ,ಯಲಬುರ್ಗಾ/ಹಿರೇವಂಕಲಕುಂಟಾ/ಕುಕನೂರ/ಕುದ್ರಿಮೋತಿ/ತಳಕಲ್/ಇಟಗಿ/ವಜ್ರಬಂಡಿ
2. ಸಅ(ತಾಂ)/ಆರ್.ಸಿ.ಎಮ್.ಎಫ್. ಕಡತಕ್ಕೆ